1029 ಶ್ರೀ ನರೇಂದ್ರ ಬಾಬು ನೆ.ಲ : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ನೋಂದಣಿ ಆಗಿವೆ; ಅದರಲ್ಲಿ ಎಷ್ಟು ಮುಚ್ಚಿವೆ; (ಜಿಲ್ಲಾವಾರು, ನಗರವಾರು ಮಾಹಿತಿ ಒದಗಿಸುವುದು);

ಆ) ಆರ್ಥಿಕ ಹಿಂಜರಿತನದಿಂದ ಎಷ್ಟು ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರು ಕೆಲಸವನ್ನು ಕಳೆದು ಕೊಂಡಿದ್ದಾರೆ;

ಇ) ಈ ಕಾರ್ಮಿಕರ ಹಿತರಕ್ಷಣೆಗೆ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ;

ಈ) ಅಸಂಘಟಿತ ಕಾರ್ಮಿಕರ ಪಿ.ಎಫ್.ಮತ್ತಿತರ ಭತ್ಯೆಗಳನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ರಾಜ್ಯದಲ್ಲಿ 31-3-2009ರ ಅಂತ್ಯಕ್ಕೆ ಒಟ್ಟು 3,77,725 ಸಣ್ಣ ಕೈಗಾರಿಕಾ ಘಟಕಗಳನ್ನು ನೋಂದಣಿಯಾಗಿರುತ್ತವೆ. ಇದರ ಪೈಕಿ 46813 ಘಟಕಗಳು ಮುಚ್ಚಲ್ಪಟ್ಟಿವೆ (ಮಾಹಿತಿ ಲಗತ್ತಿಸಿದೆ).

ಆ) ಆರ್ಥಿಕ ಹಿಂಜರಿತದಿಂದ ಸುಮಾರು 16,587 ಕಾರ್ಮಿಕರು ಕೆಲಸ ಕಳೆದುಕೊಂಡಿರುತ್ತಾರೆ.

ಇ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಯಾವುದೇ ಯೋಜನೆಗಳು ಇರುವುದಿಲ್ಲ.

ಈ) ಪಿ.ಎಫ್.ಕಾಯ್ದೆಯ ಅನುಷ್ಠಾನವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುವ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಜಿಲ್ಲಾವಾರು ಸಣ್ಣ ಕೈಗಾರಿಕೆಗಳು ನೋಂದಣಿ ಹಾಗೂ ಮುಚ್ಚಿರುವ ಘಟಕಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಒಟ್ಟು ನೋಂದಣಿ (31–3–2009)	ಗಣತಿ ನಡೆಸಿದ ಘಟಕಗಳ ಸಂಖ್ಯೆ	ಒಟ್ಟು ಮುಚ್ಚಿರುವ ಘಟಕಗಳು		
				ಗ್ರಾಮೀಣ	ನಗರ	ಒಟ್ಟು
1	ಬೆಂಗಳೂರು (ನಗರ)	64786	33461	322	12911	13233
2	ಬೆಂಗಳೂರು (ಗ್ರಾ)	16743	5123	821	313	1134
3	ಬಾಗಲ ಕೋಟೆ	7363	4459	274	456	730
4	ಬೀದರ್	7588	3682	671	745	1425
5	ಬೆಳಗಾವಿ	32201	17196	1379	1870	3249
6	ಬಿಜಾಪುರ	8137	5067	346	520	866
7	ಬಳ್ಳಾರಿ	14974	8605	923	1652	2575
8	ಚಾಮರಾಜ ನಗರ	7883	2640	231	221	452
9	ಚಿಕ್ಕಮಗ ಳೂರು	7685	4451	469	607	1076
10	ಚಿತ್ರದುರ್ಗ	9434	5490	251	250	501
11	ಚಿಕ್ಕಬಳ್ಳಾಪುರ	428	3315	51	44	95
12	ದಕ್ಷಿಣ ಕನ್ನಡ	18990	9813	1048	1682	2730
13	ಧಾರವಾಡ	15790	10137	53	118	171
14	ದಾವಣಗೆರೆ	8251	5863	789	1336	2125
15	ಗದಗ	7310	4064	383	475	858
16	ಗುಲ್ಬರ್ಗಾ	15693	9011	926	1080	2006
17	ಹಾಸನ	10883	6120	579	581	1160
18	ಹಾವೇರಿ	8775	4699	480	373	853
19	ಕೊಡಗು	3472	1227	385	141	526
20	ಕೋಲಾರ	13848	4514	532	745	1277
21	ಕೊಪ್ಪಳ	4923	2791	243	217	460
22	ಮಂಡ್ಯ	8948	4861	942	688	1630
23	ಮೈಸೂರು	21951	9233	635	1362	1997
24	ರಾಮನಗರ	571	3538	43	64	107
25	ರಾಯಚೂರು	8847	4904	122	259	381

26	ಶಿವಮೊಗ್ಗ	14361	7097	489	694	1183
27	ತುಮಕೂರು	21082	7683	920	948	1868
28	ಉಡುಪಿ	7800	5378	1205	556	1761
29	ಉತ್ತರ ಕನ್ನಡ	9008	3541	190	194	384
	ಒಟ್ಟು	**377725**	**197963**	**15702***	**31111***	**46813***

1030 ಶ್ರೀ ನೆ.ಲ.ನರೇಂದ್ರಬಾಬು : ಮಾನ್ಯ ಜವಳಿ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಕ್ರೀಡೆಗಳನ್ನು ಯುವಜನ ಸೇವಾ ಇಲಾಖೆಯಿಂದ ಅಧಿಕೃತವಾಗಿ ಗುರುತಿಸಲಾಗಿದೆ.

ಆ) ಕಳೆದ ಮೂರು ವರ್ಷಗಳಿಂದ ಯಾವ ಯಾವ ಕ್ರೀಡಾ ಕ್ಷೇತ್ರದಲ್ಲಿ ಎಷ್ಟು ಯುವಕರನ್ನು ಗುರುತಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಿಗೆ ಕಳುಹಿಸಿಕೊಡಲಾಗಿದೆ. (ಹೆಸರು ಮತ್ತು ಕ್ರೀಡಾವಾರು ಸಹಿತ ಮಾಹಿತಿ ಒದಗಿಸುವುದು)

ಇ) ಯುವಜನ ಸೇವಾ ಇಲಾಖೆಯಲ್ಲಿ ತರಬೇತಿದಾರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ, ಯುವಜನ ಸೇವೆ ಮತ್ತು ಕ್ರೀಡಾ ಸಚಿವರು) :

ಅ) ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ರಾಜ್ಯದಲ್ಲಿ ಅಧಿಕೃತವಾಗಿ ಗುರುತಿಸಲಾದ ಕ್ರೀಡೆಗಳ ವಿವರ ಈ ಕೆಳಕಂಡಂತಿದೆ: ಅಥ್ಲೆಟಿಕ್ಸ್, ಆರ್ಚರಿ, ದೇಹಧಾರ್ಢ್ಯ, ಬ್ಯಾಡ್ಮಿಂಟನ್, ಬಿಲಿಯರ್ಡ್ಸ್, ಬಾಲ್ ಬ್ಯಾಡ್ಮಿಂಟನ್, ಬ್ಯಾಸ್ಕೆಟ್ ಬಾಲ್, ಬಾಕ್ಸಿಂಗ್, ಚೆಸ್, ಸೈಕ್ಲಿಂಗ್, ಕ್ರಿಕೆಟ್, ಫುಟ್ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ ಹ್ಯಾಂಡ್‌ಬಾಲ್, ಜುಡೊ, ಖೋ-ಖೋ, ಕಬಡ್ಡಿ, ಪವರ್ ಲಿಫ್ಟಿಂಗ್, ರೈಫಲ್ ಶೂಟಿಂಗ್, ರೋಯಿಂಗ್, ಸ್ಕೇಟಿಂಗ್, ಈಜು, ಟೆನ್ನಿಸ್, ಟೇಬಲ್ ಟೆನ್ನಿಸ್, ಟೇಕ್ವೋಂಡೋ, ಟ್ರಯತ್ಲಾನ್, ವಾಲಿಬಾಲ್, ವೈಯ್ಟ್ಸ್ ಲಿಫ್ಟಿಂಗ್, ಕುಸ್ತಿ, ಯೋಗ, ಫನ್ಸಿಂಗ್, ಈಕ್ವೆಸ್ಟೇರಿಯನ್, ಡೈವಿಂಗ್, ವಾಟರ್ ಸ್ಪೋರ್ಟ್ಸ್ (ಕಯಾಕಿಂಗ್, ಕೆನೋಯಿಂಗ್ ಮತ್ತು